ಜಾರಿ ಸಂಖ್ಯೆ36/2025

ಪಿಡಬ್ಲ್ಯೂ1

**ಸಾಕ್ಷಿಯು ದಿಃ 28.03.2026 ರಂದು ನ್ಯಾಯಾಲಯದಲ್ಲಿ ಹಾಜರಿದ್ದು ಪ್ರಮಾಣ ವಚನ ಭೋಧಿಸಲಾಯಿತು.**

**ಪಾಟೀ ಸವಾಲು: ತೀರ್ಪುಋಣಿದಾರರ ಪರ ವಕೀಲರಿಂದ**

ಅರ್ಜಿ ಸ್ವತ್ತು ನಮಗೆ ಸರ್ಕಾರದಿಂದ ಮಂಜೂರಾಗಿತ್ತು ಎಂದರೆ ಸರಿ. ಎದುರುದಾರರಿಗೆ 13 ವರ್ಷದ ಹಿಂದೆ ಕ್ರಯದ ಕರಾರು ಪತ್ರ ಬರೆದುಕೊಟ್ಟಿದ್ದೆ. ದಿನಾಂಕ 13.12.2007 ರಂದು ನಾನು ತೀರ್ಪುಋಣಿದಾರರಿಗೆ ಅರ್ಜಿ ಸ್ವತ್ತಿಗೆ ಸಂಬಂಧಿಸಿದಂತೆ ನೋಂದಣಿ ಕರಾರು ಪತ್ರ ಮಾಡಿಕೊಟ್ಟಿದ್ದೆ ಎಂದರೆ ಸರಿಯಲ್ಲ. ತೀರ್ಪುಋಣಿದಾರರಿಗೆ ಕರಾರು ಪತ್ರ ಮಾಡಿಕೊಟ್ಟಾಗ ಅವರಿಂದ 40 ಸಾವಿರ ರೂಪಾಯಿಯನ್ನು ಪಡೆದುಕೊಂಡಿರುತ್ತೇನೆ. ಕರಾರನ್ನು ಮಾಡಿಕೊಟ್ಟಾಗ ಅರ್ಜಿ ಸ್ವತ್ತಿನ ಸ್ವಾಧೀನವನ್ನು ತೀರ್ಪುಋಣಿದಾರರಿಗೆ ಬಿಟ್ಟು ಕೊಟ್ಟಿದ್ದೆ ಎಂದರೆ ಸರಿಯಲ್ಲ. ದಿನಾಂಕ 13.12.2007ರ ಕರಾರಿನ ಮೂಲಕ ನಾನು ಅರ್ಜಿ ಸ್ವತ್ತಿನ ಸ್ವಾಧೀನವನ್ನು ತೀರ್ಪುಋಣಿದಾರರಿಗೆ ಬಿಟ್ಟು ಕೊಟ್ಟಿದ್ದೆ ಎಂದರೆ ಸರಿಯಲ್ಲ. ತೀರ್ಪುಋಣಿದಾರರು ನನ್ನ ಜಮೀನಿಗೆ ತಕರಾರು ಮಾಡುತ್ತಿದ್ದಾರೆ ಬಿಡಿಸಿಕೊಡಿ ಎಂದು ದಾವೆ ಹಾಕಿದ್ದೆ. ಓಎಸ್ 167/2022ರ ದಾವೆ ಡಿಕ್ರಿಯಾದ ನಂತರ ತೆರಕಣಾಂಬಿ ಪೊಲೀಸರಿಗೆ ದೂರು ಕೊಟ್ಟಿದ್ದೆ ಎಂದರೆ ಸರಿ. ಪೊಲೀಸರಿಗೆ ನೀಡಿದ ದೂರಿನಲ್ಲಿ ದಾವೆ ನಮ್ಮ ಪರವಾಗಿ ತೀರ್ಪಾಗಿದೆ, ಅರ್ಜಿ ಸ್ವತ್ತನ್ನು ತೀರ್ಪುಋಣಿದಾರರಿಂದ ಸ್ವಾಧೀನ ಕೊಡಿಸಿ ಎಂದು ಕೋಡಿದ್ದೆ ಎಂದರೆ ಸರಿ. ಪೊಲೀಸರು ಅರ್ಜಿ ಸ್ವತ್ತಿನ ಸ್ವಾಧೀನ ಕೊಡಿಸುವಂತೆ ಆದೇಶವಿಲ್ಲ ಆ ರೀತಿ ನ್ಯಾಯಾಲಯದಿಂದ ಆದೇಶ ತಂದು ಕೊಡುವಂತೆ ನನಗೆ ತಿಳಿಸಿದ್ದರು ಎಂದರೆ ಸರಿ. ಅದಾದ ನಂತರದಲ್ಲಿ ನಾನು ಪ್ರಸ್ತುತ ಅರ್ಜಿಯನ್ನು ಸಲ್ಲಿಸಿದ್ದೆ ಎಂದರೆ ಸರಿ. ಅರ್ಜಿ ಸ್ವತ್ತಿನ ಸ್ವಾಧೀನ ಕೊಡಿಸುವಂತೆ ನಾನು ಅರ್ಜಿಯಲ್ಲಿ ಕೇಳಿಲ್ಲ. ಅರ್ಜಿ ಸ್ವತ್ತಿನ ಪಕ್ಕದಲ್ಲಿ ತೀರ್ಪುಋಣಿದಾರರಿಗೆ ಸೇರಿದ ಉಳಿಕೆ ಜಮೀನು ಇದೆ ಎಂದರೆ ಸರಿ. ಅರ್ಜಿ ಸ್ವತ್ತಿಗೆ ತೀರ್ಪುಋಣಿದಾರರು ಅವರ ಜಮೀನಿನ ಕೊಳವೆ ಬಾವಿಯಿಂದ ನೀರನ್ನು ಹಾಯಿಸಿಕೊಂಡು 2007 ರಿಂದ ಬೇಸಾಯ ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ.

ಜಾರಿ ಸಂಖ್ಯೆ36/2025

ಪಿಡಬ್ಲ್ಯೂ1

ತೀರ್ಪುಋಣಿದಾರು ಅರ್ಜಿ ಸ್ವತ್ತಿನಲ್ಲಿ ಸ್ವಾಧೀನದಲ್ಲಿರುವುದರಿಂದ ನನ್ನ ಸ್ವಾಧೀನಕ್ಕೆ ತೊಂದರೆ ಕೊಡುವ ಪ್ರಶ್ನೆಯೇ ಇಲ್ಲ ಎಂದರೆ ಸರಿಯಲ್ಲ. ನ್ಯಾಯಾಲಯದಿಂದ ಆದೇಶ ಪಡೆದು ತೀರ್ಪುಋಣಿದಾರ ಸ್ವಾಧೀನದಲ್ಲಿರುವ ಅರ್ಜಿ ಸ್ವತ್ತನ್ನು ವಶಕ್ಕೆ ಪಡೆಯಲು ಪ್ರಯತ್ನಿಸಿದ್ದೆ ಎಂದರೆ ಸರಿಯಲ್ಲ. ತೀರ್ಪುಋಣಿದಾರರಿಂದ ಹಣ ಪಡೆದು ಕರಾರು ಪತ್ರ ಬರೆದುಕೊಟ್ಟಿದ್ದು ಅವರಿಗೆ ಮೋಸ ಮಾಡುವ ಉದ್ದೇಶದಿಂದ ಸುಳ್ಳು ದಾವೆ ಸಲ್ಲಿಸಿ ಈ ಅರ್ಜಿ ಸಲ್ಲಿಸಿ ತೊಂದರೆ ಕೊಡುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

(ಶ್ರೀ. ದೀಪು ಎಂ.ಟಿ.)
ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ,
ಗುಂಡ್ಲುಪೇಟೆ